28/1

# 1999

# KANNADA

## Paper 1

## (Literature)

*Time : 3 Hours ]* *[ Maximum Marks : 300*

### *INSTRUCTIONS*

*Candidates should attempt **five** questions in all, taking at least **two** from each Section.*

*All questions carry equal marks.*

*Answers must be written in Kannada.*

## ವಿಭಾಗ A

1. ಭಾಷೆ ಎಂದರೇನು ? ಭಾಷಾ ವರ್ಗೀಕರಣದ ವಿಧಾನಗಳಾವುವು ? ವಿವೇಚಿಸಿರಿ.

2. ದ್ರಾವಿಡ ಭಾಷೆಗಳ ವೈಶಿಷ್ಟ್ಯಗಳೇನು ? ವಿವರಿಸಿರಿ.

3. ಈ ಕೆಳಗಿನವುಗಳಲ್ಲಿ ಯಾವುದಾದರೂ ಐದಕ್ಕೆ ಟಿಪ್ಪಣಿ ಬರೆಯಿರಿ :
   (a) ಕನ್ನಡ ವರ್ಣಮಾಲೆ
   (b) ಕನ್ನಡದ ಉಪಭಾಷೆಗಳು
   (c) ಕಾಲಗಳು
   (d) ಕನ್ನಡ ವಿಭಕ್ತಿ ಪ್ರತ್ಯಯಗಳು
   (e) ಕನ್ನಡ ಭಾಷೆಯ ಅವಸ್ಥಾಭೇದಗಳು
   (f) ರಾಘವಾಂಕನ ಹರಿಶ್ಚಂದ್ರಕಾವ್ಯ

[Turn over

(g) ಬಸವಣ್ಣನ ವಚನಗಳು

(h) ವಡ್ಡಾರಾಧನೆ

(i) ಸಾಂಗತ್ಯದ ಕವಿ ರತ್ನಾಕರವರ್ಣಿ

(j) ಶ್ರೀನಿವಾಸ (ಮಾಸ್ತಿ)

4. ಚಂಪೂ ಸಾಹಿತ್ಯದ ಲಕ್ಷಣ, ಉಗಮ ಮತ್ತು ವಿಕಾಸವನ್ನು ಪ್ರಮುಖ ಚಂಪೂ ಕವಿಗಳ ರಚನೆಗಳ ಹಿನ್ನೆಲೆಯಲ್ಲಿ ವಿವೇಚಿಸಿರಿ.

5. ಹೊಸಗನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರದ ಸ್ಥಾನವೇನು ? ಪರಾಮರ್ಶಿಸಿರಿ.

## ವಿಭಾಗ B

**6.** ಧ್ವನಿ ಎಂದರೇನು ? ಧ್ವನಿಪ್ರಭೇದಗಳು ಯಾವುವು ? ವಿಶದಪಡಿಸಿರಿ.

**7.** ಭಾರತೀಯ ಕಾವ್ಯಮೀಮಾಂಸೆಯ ವಿವಿಧ ಪ್ರಸ್ಥಾನಗಳು ಯಾವುವು ? ವಿಶದವಾಗಿ ಪರಿಶೀಲಿಸಿರಿ.

**8.** ಕರ್ನಾಟಕ ಸಂಸ್ಕೃತಿಗೆ ಹೊಯ್ಸಳರ ಕೊಡುಗೆಗಳೇನೆಂಬುದನ್ನು ನಿರೂಪಿಸಿರಿ.

**9.** ಕರ್ನಾಟಕದ ವಿವಿಧ ಧರ್ಮಗಳು ಯಾವುವು ? ಕರ್ನಾಟಕದ ಸಂಸ್ಕೃತಿಕ ಚರಿತ್ರೆಯಲ್ಲಿ ಅವುಗಳ ಪಾತ್ರವೇನು ? ಚರ್ಚಿಸಿರಿ.

**10.** ಈ ಕೆಳಗಿನವುಗಳಲ್ಲಿ ಯಾವುದಾದರೂ **ಐದಕ್ಕೆ** ಟಿಪ್ಪಣಿ ಬರೆಯಿರಿ :

(a) ವಾಮನ

(b) ವಕ್ರೋಕ್ತಿ

(c) ಸಹೃದಯ

(d) ವಿಮರ್ಶಕನ ಗುಣಲಕ್ಷಣಗಳು

(e) ನವ್ಯ ಸಾಹಿತ್ಯ

(f) ಕಲ್ಯಾಣಿ ಚಾಲುಕ್ಯರು

(g) ಕರ್ನಾಟಕದಲ್ಲಿ ವಾಸ್ತುಶಿಲ್ಪ

(h) ಬಾದಾಮಿ

(i) ಕೃಷ್ಣದೇವರಾಯ

(j) ಕರ್ನಾಟಕ ಏಕೀಕರಣ

# 1999
# KANNADA
## Paper 2
## (Literature)

*Time : 3 Hours ]* *[ Maximum Marks : 300*

### *INSTRUCTIONS*

*Candidates should attempt questions from Sections A, B and C as indicated under each Section.*

*The number of marks carried by each question is indicated at the end of the question.*

*Answers must be written in Kannada.*

## ವಿಭಾಗ A

1. ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪದ್ಯಗಳ ಸಂದರ್ಭ, ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ. *20×4=80*

(a) ಪಿರಿಯಣ್ಣಂ ಗುರು ತಂದೆಯೆಂದೆರಗುವಂ ಮುನ್ನೆಲ್ಲಮಿಂತೀಗಳಾ
ಳರಸೆಂಬೊಂದು ವಿಭೇದಮಾದೊಡೆರಕಂ ಚೀ ಕಷ್ಟಮಲ್ತೇವಸುಂ
ಧರೆಗಯ್ಯಂ ದಯೆಗೆಯ್ಯೆ ಮುನ್‌ಪಡೆದುರ್ಕಿಂತೀತನೊಳ್ ತೊಟ್ಟ ಕಿಂ
ಕರಭಾವಂ ನಮಗಕ್ಕೆಗೊಟ್ಟು ಮಡಗೊಳಿಣ್ಣಂದಮಂ ಪೋಲದೇ

(b) ಪಿಡಿಯೆಂ ಚಕ್ರಮನೆಂಬ ಚಕ್ರಿಯ ನಿಳಾಚಕ್ರಂ ಭಯಂಗೊಳ್ವಿನಂ
ಪಿಡಿಯಿಪ್ಪೆಂ ಕರಚಕ್ರಮಂ ನರರಥ ತೂಳ್ದಾ ಕುರುಕ್ಷೇತ್ರದಿಂ
ಪಡುವೆಣ್ಗಾವುದು ಪೋಗೆ ಪೋಗಡಿಸುವೆಂ ನಿಚ್ಚಂ ಧರಾಧೀಶರಂ
ಪಡಲಿಟ್ಟಂತಿರೆ ಮಾಳ್ಪೆನೋವದೆ ಪಯಿಂಥಾಸಿರ್ವರಂ ಯುದ್ಧದೊಳ್

(c) ಪುರದ ಪುಣ್ಯಂ ಪುರುಪರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ ಸಪ್ತ
ಶರಧಿ ಪರಿವೃತ ಧರೆಯ ಸಿರಿಯ ಸೊಬಗಜ್ಞಾತವಾಸಕ್ಕೆ ಪೋಗುತಿದೆ ಕೋ
ಎರೆವ ದೀನಾನಾಥರಾನಂದವಡಗುತಿದೆ
ವರಮುನೀಂದ್ರರ ಯಾಗ ರಕ್ಷೆ ಬಲವಳಿಯುತಿದೆ
ನಿರುತಮೊಂದೊಂದಾಗಿ ಬಂದು ಸಂದಿಸಿ ನಿಂದ ಮಂದಿ ನೆರೆಮೊರೆಯಿಟ್ಟುದು.

[Turn over

(d) ಇಂತಪ್ಪ ಸಂಪದ ಪ್ರಸರದೊಳು ಸುಖಮಿರ್ದು
ಚಿಂತಿಸಿದನಾ ವಸ್ತುಗಳ ನಡುವೆ ಕುಳ್ಳಿರ್ದು
ಅಯ್ಯಲಾ ಇಂತಪ್ಪನರ್ಘ್ಯಮಂ ಭಕ್ತರ್ಗೆ
ಕಯ್ಯಾರೆ ಕೊಡಲಿಲ್ಲ ಪರಮಶಿವ ಭಕ್ತರ್ಗೆ
ಎಂದೋ ಮಹೇಶರ್ಗೆ ಸೇರಿಸುವೆ ನಿಂತಿದಂ
ಎಂದೋ ಸುಚಿತ್ತವಾರಾಧಿಸುವೆ ನಿಂತಿದಂ
ಕಾಕಭಾಜನವಾಗಿ ಪೋಗುತಿರ್ಪುದಕಟ
ಲೋಕಾಯತರ್ಗೆ ಸಾರುತ್ತ ಮಿರ್ದಪುದಕಟ
ದೇವ ಸಂಗಯ್ಯ ಸಲಿಸೆನ್ನ ಮನದಳ್ತಿಯಂ
ದೇವ ಭಕ್ತರ್ಗೀವ ಪುಣ್ಯಮಯ ಯುಕ್ತಿಯಂ.

(e) ತಗರೆರಡ ಖತಿಗೊಳಿಸಿ ಬಲುಗಾ
ಳಗವ ನೋಡುವರಂತೆ ನಿಮ್ಮನು
ತೆಗೆತೆಗೆದು ಕಲಿಮಾಡಿ ಬಿಡುವರು ಖುಲ್ಲರಾದವರು
ನಗುತ ಹೆರೆ ಹಿಂಗುವರು ಪಿಸುಣರು
ಬಗುಳಿದವದಿರು ಬಳಿಕ ಕಡೆಯಲಿ
ಹೊಗುವಿರೈ ನೀವಿಬ್ಬರಪಕೀರಿತಿಯ ಹಾದರಕೆ

(f) ಹರಿವ ಹಾವಿಗಂಜೆ ಉರಿಯ ನಾಲಗೆ ಗಂಜೆ !
ಸುರಗಿಯ ಮೊನೆ ಗಂಜೆ !
ಒಂದಕ್ಕಂಜುವೆ ಒಂದಕ್ಕಳುಕುವೆ;
ಪರಧನ ಪರಸ್ತ್ರೀಯೆಂಬ ಜೂಬಿಂಗಂಜುವೆ !
ಮುನ್ನಂಜದ ರಾವಣನೇ ವಿಧಿಯಾದ
ಅಂಜುವೆನಯ್ಯ ಕೂಡಲ ಸಂಗಮದೇವ !

(g) ಭೋಗ ವಿಚಾರವು ಬೇಕು ನೃಪತಿಗಾತ್ಮ
ಯೋಗ ವಿಚಾರವು ಬೇಕು
ರಾಗರಸಿಕನಾಗಬೇಕು ಭಾವಿಸೆವೀತ
ರಾಗರಸಿಕನಾಗಬೇಕು
ಕೊಡಬೇಕು ಕೊಡುವಲ್ಲಿ ಪಾತ್ರವರಿಯಬೇಕು
ನುಡಿ ಬೇಕು ಮೌನವೂ ಬೇಕು
ಬಡವರಂತಿರಬೇಕು ಪ್ರಭುವಿನಂತಿರಬೇಕು
ನಡೆಯಿದು ಜಾತಿ ಕ್ಷತ್ರಿಯರ

(h) ಸೋರುವ ಮನೆಯಿಂದೆ ಹೋರುವ ಸತಿಯಿಂದೆ
ದಾರಿದ್ರ್ಯದವನ ಬದುಕಿಂದೆ ಹೊಯಿತೆಂಬ
ಮಾರಿಯೇ ಲೇಸು ಪರಮಾರ್ಥ
ಅಡಿಯ ಮುಂದಿಡೆ ಸ್ವರ್ಗ ಅಡಿಯ ಹಿಂದಿಡೆ ನರಕ
ಅಡಿಗಶ್ವಮೇಧಫಲ ಸ್ವಾಮಿಕಾರ್ಯಕ್ಕೆ
ಮಡಿಯಲೇಬೇಕು ಪರಮಾರ್ಥ

## ವಿಭಾಗ B

*ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ಮಾತ್ರ ಉತ್ತರ ಬರೆಯಿರಿ.* *55×2=110*

2. "ತೀರ್ಥಂಕರರ ಧರ್ಮವಿಜಯದ ಮುಂದೆ ಚಕ್ರವರ್ತಿಯ ಆಡಂಬರದ ಲೌಕಿಕ ದಿಗ್ವಿಜಯ ಮಂಕು ಮಂಕು" – **ಆದಿಪುರಾಣ**ಕ್ಕೆ ಸಂಬಂಧಿಸಿದ ಈ ಹೇಳಿಕೆಯನ್ನು ಪರಾಮರ್ಶಿಸಿರಿ.

**ಅಥವಾ**

ಪಂಪಭಾರತದಲ್ಲಿ ದೇಸಿಮಾರ್ಗಗಳ ಸುಂದರ ಸಮನ್ವಯವು ಹೇಗೆ ಫಲಿಸಿದೆ ? ವಿಮರ್ಶಿಸಿರಿ.

3. ರಾಘವಾಂಕನ ನಾಟ್ಯಪ್ರತಿಭೆ **ಹರಿಶ್ಚಂದ್ರಕಾವ್ಯ**ದಲ್ಲಿ ಹೇಗೆ ಅದ್ಭುತ ರಮ್ಯವಾಗಿ ಬೆಳಗಿದೆ ? ಉದಾಹರಣೆ ಸಹಿತ ವಿಶದಪಡಿಸಿರಿ.

**ಅಥವಾ**

ಭಾರತದಲ್ಲಿ ಉದ್ಯೋಗಪರ್ವದ ಮಹತ್ವವೇನೆಂಬುದನ್ನು ಪರಿಶೀಲಿಸಿರಿ.

4. ಬಸವರಾಜದೇವರ ರಗಳೆಯಲ್ಲಿ ಸನ್ನಿವೇಶ, ಸೂಳ್ನುಡಿ, ಪವಾಡ ಪ್ರಸಂಗಗಳ ಮೂಲಕ ಬಸವಣ್ಣನ ಪಾತ್ರ ಹೇಗೆ ಚಿತ್ರಿತವಾಗಿದೆ ? ವಿವರಿಸಿರಿ.

**ಅಥವಾ**

ಜೀವನಕ್ಕೆ ಯೋಗ ಭೋಗಗಳೆರಡೂ ಅವಶ್ಯಕವೆಂಬುದನ್ನು ರತ್ನಾಕರವರ್ಣಿ ಭರತೇಶವೈಭವದಲ್ಲಿ ಹೇಗೆ ನಿರೂಪಿಸಿದ್ದಾನೆ ? ವಿವೇಚಿಸಿರಿ.

5. ಬಸವಣ್ಣನವರ ವಚನಗಳಲ್ಲಿ ಪ್ರಕೃತಿಯು ತತ್ತ್ವಪ್ರತಿಪಾದನೆಗಳಿಗಾಗಿ ಹೇಗೆ ಬಳಕೆಯಾಗಿದೆ ? ವಿಶದಪಡಿಸಿರಿ.

**ಅಥವಾ**

ಸರ್ವಜ್ಞನ ವಚನಗಳಲ್ಲಿ ಪ್ರತಿಪಾದಿತವಾದ ನೀತಿಯ ಅಂಶಗಳನ್ನು ಸಂಗ್ರಹವಾಗಿ ನಿರೂಪಿಸಿರಿ.

[Turn over

## ವಿಭಾಗ C

*ಕೆಳಗಿನವುಗಳಲ್ಲಿ ಬೇಕಾದ ಎರಡಕ್ಕೆ ಮಾತ್ರ ಉತ್ತರ ಬರೆಯಿರಿ.* *55×2=110*

6. ನವೋದಯ ಹಾಗೂ ನವ್ಯ ಕಾವ್ಯಗಳ ಸ್ವರೂಪ, ಲಕ್ಷಣ ಹಾಗೂ ವ್ಯತ್ಯಾಸಗಳನ್ನು ವಿಶದಪಡಿಸಿರಿ.

**ಅಥವಾ**

"ಹೊಸಗನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಸಣ್ಣಕತೆಯ ಪಾತ್ರ ಮಹತ್ವಪೂರ್ಣವಾದುದು." – ಈ ಮಾತನ್ನು ಅತ್ಯುತ್ತಮ ಸಣ್ಣ ಕತೆಗಳು ಸಂಕಲನದ ಆಧಾರದಲ್ಲಿ ಪರಾಮರ್ಶಿಸಿರಿ.

7. ಪ್ರಕೃತಿ ಹಾಗೂ ಸಂಸ್ಕೃತಿಯ ಚಿತ್ರಣ ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಹೇಗೆ ಮೂಡಿಬಂದಿದೆ ? ವಿಚಾರ ಮಾಡಿ.

**ಅಥವಾ**

"ಚೋಮನದುಡಿಯು ಅಸ್ಪೃಶ್ಯರು ಎದುರಿಸುತ್ತಿದ್ದ ಸಾಮಾಜಿಕ ಅನ್ಯಾಯಗಳ ವಿರುದ್ಧ ದನಿಯೆತ್ತಿದ ಸಾಮಾಜಿಕ ಕಾದಂಬರಿ." – ಈ ಮಾತನ್ನು ವಿಮರ್ಶಿಸಿ.

8. ಮಹಾಭಾರತದ ಏಕಲವ್ಯನ ಉಪಾಖ್ಯಾನದಲ್ಲಿ ಇಂಗಿತವಾಗಿ ಅಪ್ರಕಟಿತ ರೂಪದಲ್ಲಿರುವ ಮಹತ್ತು ಬೆರಳ್ಗೆ ಕೊರಳ್ ನಾಟಕದಲ್ಲಿ ಹೇಗೆ ಸುಪ್ರಕಟವಾಗಿ ಗೋಚರಿಸುತ್ತದೆ ? ಸಮಾಲೋಚಿಸಿರಿ.

**ಅಥವಾ**

'ಕನ್ನಡದಲ್ಲಿ ಅಶ್ವತ್ಥಾಮನ್ ದುರಂತ ನಾಟಕಕ್ಕೆ ಒಂದು ಉತ್ತಮ ಉದಾಹರಣೆ.' – ವಿಮರ್ಶಿಸಿರಿ.

9. "ಗರತಿಯಹಾಡು ನಮ್ಮ ಸ್ತ್ರೀ ಜೀವನದ ಒಳಗನ್ನಡಿ. ಅದು ನಮ್ಮ ಹೆಣ್ಣುಮಕ್ಕಳ ಹೃದಯದ ಪಡಿಗನ್ನಡಿ." – ಈ ಮಾತನ್ನು ಉದಾಹರಣೆ ಸಹಿತ ಪರಾಮರ್ಶಿಸಿರಿ.

**ಅಥವಾ**

"ಒಗಟು ಜನತೆಯ ಬುದ್ಧಿವೈಭವ, ಹಾಸ್ಯಪ್ರಿಯತೆ, ಚತುರೋಕ್ತಿ, ವಿಡಂಬನ ಸ್ವಭಾವ, ಬೋಧನ ಧರ್ಮ ಮುಂತಾದುವುಗಳನ್ನು ಚಿತ್ರಿಸಲು ಪ್ರಯತ್ನಿಸುತ್ತದೆ." – ಸೋದಾಹರಣ ವಿವೇಚಿಸಿರಿ.